ಮಕ್ಕಳನ್ನು ಚೆಂದಕೆ ಮರುಳು ಮಾಡಿ ಪೊನ್ನಾನಿಗೆ ಸಾಗಿಸಿ ಮತಾಂತರ ಮಾಡ್ತಾರೆ. ಇಲ್ಲದಿದ್ದರೆ ಗಲ್ಫಿಗೆ ಸಾಗಿಸಿ ವಯಿವಾಟು ಮಾಡ್ತಾರೆ. ನೀನು ಮಗಳಿಗೆ ಸ್ವಲ್ಪ ಬುದ್ಧಿ ಹೇಳು. ಮತ್ತೆ ನಾವು ಹೇಳಲಿಲ್ಲ ಅಂತ ಬೇಡ' ಅಂದಿದ್ದರು. ಆಗ ಸುರೇಶ, 'ಇಬ್ಬರೂ ಮಂಗಳೂರಿಗೇ ಹೋಗುವವರಲ್ವ. ಟ್ರೈನಿನಲ್ಲೊ ಬಸ್ಸಿನಲ್ಲೊ ಸಿಕ್ಕಿದಾಗ ಗುರ್ತದಲ್ಲಿ ಮಾತಾಡ್ತಾರೆ. ಅದರಲ್ಲಿ ಬಣ್ಣ ಕಟ್ಲಿಕ್ಕೆಂತ ಉಂಟು? ಈಗೆಲ್ಲ ಹುಡುಗ್ರು ಹುಡ್ಗೀರು ಮಾತಾಡುವುದೊಂದು ಸಂಗತಿಯಾ ಮಾರಾಯ್ರೆ?' ಅಂದಿದ್ದ. ಅವರೆದುರು ಹಾಗೆ ಹೇಳಿದ್ದರೂ  ಅವಮಾನದಿಂದ ಕುದಿಯುತ್ತಿದ್ದ ಸುರೇಶ ಸಂಜೆ ಮನೆಗೆ ಬಂದವನೇ, 'ನೀನೆಂತ ಮಂಗ್ಳೂರಿಗೆ ಕಲೀಲಿಕ್ಕೆ ಹೋಗುವುದಾ ಅಲ್ಲಾ ಯಾರ್‍ಯಾರೊಟ್ಟಿಗೆ ಪೇಟೆ ತಿರುಗ್ಲಿಕ್ಕಾ? ಇನ್ನೊಮ್ಮೆ ಯಾರ ಬಾಯಿಯಲ್ಲಾದರೂ ಹೀಗೇ ಅಂತ ಕೇಳಿದ್ರೆ ಶಾಲೆ ಬಿಡಿಸಿ ಮನೆಯಲ್ಲಿ ಕೂರಿಸ್ತೇನೆ ಗೊತ್ತಾಯ್ತಾ' ಎಂದು ಕೂಗಾಡಿದ್ದ. ವಾರದಲ್ಲೇ ಅನಾಹುತವಾಗಿತ್ತು. ಬೆಳಗ್ಗೆ ಕಾಲೇಜಿಗೆ ಹೋದವಳು ಸಂಜೆ ಮನೆಗೆ ಬರಲಿಲ್ಲ. ಕುಸುಮಾ ಅನುಮಾನದಿಂದ ಹುಡುಕಾಡಿದರೆ ಅವಳ ಒಳ್ಳೊಳ್ಳೆಯ ಬಟ್ಟೆಗಳು ಕಾಣೆ. ಸೀದಾ ಓಡಿದ್ದು ಫಕೀರಿಚ್ಚನ ಮನೆಗೆ. ಫಕೀರಿಚ್ಚ ವಿಚಾರಿಸಿದಾಗ ಆರೀಫನೂ ನಾಪತ್ತೆಯಾಗಿರುವುದು ಗೊತ್ತಾಗಿದ್ದು. ರಕ್ಷಾಗೆ ಹದಿನೆಂಟು ತುಂಬಲು ಇನ್ನೆರಡು ತಿಂಗಳು ಬಾಕಿಯಿತ್ತು. ಸುರೇಶ ನಾಲ್ಕು ಜನರನ್ನು ಕರೆದುಕೊಂಡು ಸೀದಾ ಹೋಗಿದ್ದು ಪೊಲೀಸ್ ಸ್ಟೇಷನ್ನಿಗೆ. ಆರೀಫನ ವಿರುದ್ಧ ಅಪ್ರಾಪ್ತ ಹುಡುಗಿಯ ಕಿಡ್ನ್ಯಾಪ್ ಕೇಸ್ ದಾಖಲಾಗಿಯೇಬಿಟ್ಟಿತು. ಪೊಲೀಸರು ಎಲ್ಲಾ ಮೂಲಗಳನ್ನುಪಯೋಗಿಸಿ ಕೆಲಸ ಮಾಡಿದರೂ ಅವರಿಗಿಂತ ವೇಗವಾಗಿ ಸುರೇಶನ ಜನಗಳೂ ಕೆಲಸ ಮಾಡಿದ್ದರಿಂದ ಒಂದು ರಾತ್ರಿ ಕಳೆದು ಎರಡನೆ ಇಳಿ ಹಗಲಿನ ಹೊತ್ತಿಗೆ ಅವರಿರುವ ಜಾಗ ಪತ್ತೆ ಹಚ್ಚಿದ್ದರು. ಪೊಲೀಸ್ ಸ್ಟೇಷನ್ನಿನಲ್ಲಿ ಪಂಚಾಯ್ತಿ ನಡೆಯಿತು. ಮಗಳು ತನ್ನೊಂದಿಗೆ ಬರಲು ಒಪ್ಪದಿದ್ದಾಗ ಉಕ್ಕಿದ ದ್ವೇಷದ ಲಾವ ರಾಚಿದ್ದು ಆರೀಫನ ಮೇಲೆ. ಮೈನರ್ ಹುಡುಗಿಯ ಮಾತಿಗೆ ಬೆಲೆಯಿರಲಿಲ್ಲ. ಆರೀಫನಿಗೂ ಪ್ರಾಯ ಇಪ್ಪತ್ತೊಂದು ತುಂಬಿರಲಿಲ್ಲ. ಅವನ ಹೆತ್ತವರು ಕೇಸ್ ಹಿಂಪಡೆಯಲು ವಿನಂತಿ ಮಾಡಿದಾಗ ಉರಿದು ಬಿದ್ದು ಕೂಗಾಡಿದ್ದ. ಫಕೀರಿಚ್ಚನ ಯಾವ ಮನವಿಗೂ ಸುರೇಶ ಒಪ್ಪಿರಲಿಲ್ಲ. 'ಅದೆಲ್ಲ ಆಗ್ಲಿಕ್ಕಿಲ್ಲ. ನನ್ನ ಮಗಳನ್ನ ಮಾರಿ ತಿನ್ಲಿಕ್ಕೆ ಹೊರಟಿದ್ದಾನವನು. ಮೊನ್ನೆ ಮೊನ್ನೆ ಬದಿಯಡ್ಕದಲ್ಲಿ ಭಟ್ಟರ ಮಗಳನ್ನು ಪೊನ್ನಾನಿಗೆ ಕೊಂಡು ಹೋಗಿ ಮತಾಂತರ ಮಾಡಿದ ಸಂಗತಿ ಮರೆತು ಬಿಟ್ರಾ? ಅದೇನು ಸುಳ್ಳು ಕತೆ ಅಲ್ಲ. ಅವಳನ್ನು ಕರೆದೊಯ್ದ ಹೆಂಗಸು ಸತ್ಯ ಬಾಯಿ ಬಿಟ್ಟಿದೆ ಅಲ್ವ. ಇಂತ ಕ್ರಿಮಿನಲ್‌ಮೈಂಡಿನವರಿಗೆ ಬುದ್ಧಿ ಬರ್‍ಬೇಕಾದ್ರೆ ಶಿಕ್ಷೆ ಆಗ್ಬೇಕು ಅಂದಿದ್ದ.'

'ಅದೆಲ್ಲ ನಂಗೂ ಗೊತ್ತಿದ್ದದ್ದೇ. ಯಾರದ್ದು ಕ್ರಿಮಿನಲ್‌ಮೈಂಡೋ ಅವರಿಗೆ ಶಿಕ್ಷೆ ಆಗ್ಬೇಕಾದ್ದೇ. ಹಾಗಂತ ಈ ಕೇಸಿಗೆ ಮಾರಾಟ, ಮತಾಂತರವನ್ನೆಲ್ಲ ಎಳೆದು ತರ್‍ಬೇಡ. ಆರೀಫನನ್ನು ಅವನ ಮನೆಯವರನ್ನು ನಿಂಗೂ ಗೊತ್ತಿದೆ. ಕೆಲವೊಮ್ಮೆ ಪ್ರಾಯ ಹೀಗೆಲ್ಲ ಚದಿ(ಮೋಸ) ಮಾಡ್ತದೆ ಸುರೇಶ. ಕೆಲವು ಮಕ್ಕಳು ಪ್ರಾಯದ ಅಮಲಿನಲ್ಲಿ ಹೀಗೆ ಆಡ್ತಾರೆ. ನಾವಾದ್ರೂ ಆಲೋಚನೆ ಮಾಡ್ಬೇಕಲ್ವ. ಮುಂದೆ ಮಕ್ಕಳನ್ನ ಜಾಗ್ರತೆ ಮಾಡಿದ್ರಾಯ್ತು. ಅಷ್ಟಕ್ಕೂ ಮತ್ತೂ ಅವರು ಹಟ ಮಾಡಿದ್ರೆ ಆಗ ನೋಡುವಾ, ಈಗ ನೀನೇ ನೋಡ್ಲಿಲ್ವಾ ನಮ್ಮ ಯುನಿಟಿ ನರ್ಸಿಂಗ್ ಹೋಮಿನ ಡಾಕ್ಟ್ರಮ್ಮನೂ ಅಬ್ಬಾಸ್ ಡಾಕ್ಟ್ರೂ ಎಷ್ಟು ಚಂದಕೆ ಸಂಸಾರ ಮಾಡಿಕೊಂಡಿಲ್ವಾ' ಎಂದು ಫಕೀರಿಚ್ಚ ಹೇಳಿದಾಗ, 'ಈ ವಿಚಾರದಲ್ಲಿ ನೀವು ಸಂಧಾನ ಮಾಡ್ಬೇಡಿ. ಇಲ್ಲಿ ನನ್ನ ಹೊಟ್ಟೆ ಬೇಯ್ತಿದೆ ಫಕೀರಿಚ್ಚ. ಶಾಲೆ ಕಲೀಲಿ ಅಂತ ಕಳಿಸಿದ್ದಕ್ಕೆ ಹೀಗೆ ಹಲ್ಕಟ್ ಕೆಲಸ ಮಾಡುವುದಾ? ಅವರ ಮನೆ